ದಿನಾಂಕ: ಫೆಬ್ರವರಿ 19, 2014

## ರಾಜ್ಯ ಸಭಾ ಕಲಾಪವನ್ನು ಇಂದು ಸಂಜೆ 5ಗಂಟೆಗೆ ಮುಂದೂಡಲು ಕಾರಣವೇನು?

–ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ರಾಜ್ಯಸಭಾವನ್ನು ದಿಢೀರಿನ ಸಂಜೆ ಐದು ಗಂಟೆಗೆ ಮುಂದೂಡಿರುವ ಕ್ರಮ ಆಶ್ಚರ್ಯ ಮೂಡಿಸಿದೆ. ಸದನವು ತಡರಾತ್ರಿವರೆಗೂ ನಡೆದು 'ಆಂಧ್ರಪ್ರದೇಶ ವಿಭಜನೆ ಮಸೂದೆ 2014'ನ್ನು ಚರ್ಚಿಸಲಿದೆ ಎಂಬ ಅನಿಸಿಕೆ ನನ್ನದಾಗಿತ್ತು.

ತೆಲಂಗಾಣ ರಾಜ್ಯದ ಸ್ಥಾಪನೆ ಹಾಗೂ ಸೀಮಾಂಧ್ರ ಪ್ರಾಂತ್ಯದ ಜನರಿಗೆ ನ್ಯಾಯವೆಂಬ ಎರಡು ತತ್ವಗಳಿಗೆ ಭಾಜಪ ಕಟಿಬದ್ಧವಾಗಿದೆ. ಈ ದಿಕ್ಕಿನಲ್ಲಿ ನಮ್ಮ ಪ್ರಯತ್ನ ನಾಳೆ ಮುಂದುವರಿಯಲಿದೆ.

ಸದನದ ಕಲಾಪದ ನೇರ ಪ್ರಸಾರ ಏರ್ಪಟ್ಟರೆ ಮಾತ್ರ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಇಡೀ ವಿಪಕ್ಷಗಳು ಪಟ್ಟು ಹಿಡಿದಿವೆ. ತಮ್ಮ ಪ್ರತಿನಿಧಿಗಳು ಆಡುವ ಮಾತುಗಳನ್ನು ಕೇಳುವ ಹಕ್ಕು ಪ್ರಜೆಗಳಿಗಿದೆ.

*****